## ವಾರ್ತಾ ವಿಶ್ಲೇಷಣೆ

**ಆತ್ಮಹತ್ಯೆಯ ತಾಂಡವ :** ಜಪಾನಿನಲ್ಲಿ ಪ್ರತಿದಿನವೂ ಸುಮಾರು ನೂರುಜನರು ತಮ್ಮನ್ನು ತಾವೇ ಕೊಂದುಕೊಳ್ಳುತ್ತಿದ್ದಾರಂತೆ! ಅಲ್ಲಿನ ಸರ್ಕಾರವು ಆತ್ಮಹತ್ಯೆಯನ್ನು ೨೦೧೬ ರ ವೇಳೆಗೆ ತಗ್ಗಿಸಬೇಕೆಂದು ಜನಾಂದೋಲನವನ್ನು ಹಾಕಿಕೊಂಡಿದೆ. ಆ ಪ್ರಯತ್ನಕ್ಕೆ ಹೆಚ್ಚುತ್ತಿರುವ ಆತ್ಮಹತ್ಯೆಗಳು ಭಾರೀ ಆಘಾತವನ್ನೇ ತಂದಿವೆ.

೨೦೦೭ ರಲ್ಲಿ ಜಪಾನಿನಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ೩೩,೦೯೩. ಸೋಜಿಗದ ಸಂಗತಿಯೆಂದರೆ, ಕಳೆದ ಹತ್ತು ವರ್ಷಗಳಿಂದ ಸರಾಸರಿ ಸಂಖ್ಯೆಯು ೩೦,೦೦೦ಕ್ಕಿಂತ ಹೆಚ್ಚಾಗಿಯೇ ಇದೆ.

ಮಾನಸಿಕ ಖಿನ್ನತೆಯೇ ಆತ್ಮಹತ್ಯೆಗಳಿಗೆ ಮುಖ್ಯಕಾರಣವೆಂದು ಹೇಳಲಾಗಿದೆ. ಅದರಲ್ಲೂ ೬೦ ವರ್ಷಕ್ಕಿಂತ ಮೇಲ್ಪಟ್ಟವರ ವೃದ್ಧರಲ್ಲಿ ಈ ಪ್ರವೃತ್ತಿ ಹೆಚ್ಚಾಗುತ್ತಿದೆ. ವೃದ್ಧರು ಕಳೆದ ಕೆಲವು ವರ್ಷಗಳಿಂದ ಕೌಟುಂಬಿಕ ಮತ್ತು ಆರ್ಥಿಕ ಸುರಕ್ಷತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಜೀವನ ಅಸಹನೀಯವಾಗುತ್ತ ಬಂದಿದೆ. ಆದ್ದರಿಂದಲೇ ಹೆಚ್ಚು ಹೆಚ್ಚು ವೃದ್ಧರು ಆತ್ಮಹತ್ಯೆಯ ಮೊರೆಹೋಗುತ್ತಿದ್ದಾರೆ.

ಅದಲ್ಲದೆ, ಜಪಾನೀಯರು ತಮ್ಮ ತೊಂದರೆಗಳ ಬಗ್ಗೆ ಬೇರೆಯವರಲ್ಲಿ ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಅದರಿಂದ ಇತರರಿಗೆ ನೋವನ್ನುಂಟುಮಾಡಲು ಅವರು ಬಯಸುವುದಿಲ್ಲ. ಹೀಗೆ ತಮ್ಮ ಸಂಕಷ್ಟಗಳನ್ನು ತಮ್ಮಲ್ಲಿಯೇ ಬಚ್ಚಿಡಲು ಪ್ರಯತ್ನಿಸುವುದರಿಂದ ಆ ಸಮಸ್ಯೆಗಳು ಉಲ್ಬಣಗೊಂಡು, ಆತ್ಮಹತ್ಯೆಗೆ ಕಾರಣವಾಗುತ್ತದೆ ಎಂದು ತಜ್ಞರು ಹೇಳುತ್ತಾರೆ.

**ಆರ್ಥಿಕ ಪ್ರಗತಿ ಮತ್ತು ಲೌಕಿಕ ಸಂಪತ್ತು ಮಾನವನಿಗೆ ಭದ್ರತೆಯನ್ನು ತಂದುಕೊಡುತ್ತವೆ ಎನ್ನುವುದು ಭ್ರಮೆ ಎಂದು ಇದರಿಂದ ಗೊತ್ತಾಗುವುದು. ಮಾನವನ ಸುರಕ್ಷತೆಯು ನೈತಿಕ ಮತ್ತು ಆಧ್ಯಾತ್ಮಿಕ ಉನ್ನತಿಗಳಿಂದ ಪ್ರಾಪ್ತವಾಗುವುದೇ ಹೊರತು, ಭೌತಿಕ ಸವಲತ್ತುಗಳು ಎಂದಿಗೂ ಅವನಿಗೆ ಸುಖಸಂತೃಪ್ತಿಗಳನ್ನು ನೀಡವು. ಇಡೀ ಪ್ರಪಂಚದಲ್ಲಿಯೇ ಅತ್ಯಂತ ಸಂಪದ್ಭರಿತ ದೇಶವಾದ ಜಪಾನಿನ ಆತ್ಮಹತ್ಯೆಯ ಆಕ್ರಂದನ ಇದನ್ನು ಸ್ಪಷ್ಟಪಡಿಸುತ್ತದೆ.**

**(ದಿ ಹಿಂದೂ, ಜೂನ್ ೨೧, ೨೦೦೮)**

**ಹಣದುಬ್ಬರದ ಅಬ್ಬರ :** ಇತ್ತೀಚೆಗೆ ನಮ್ಮ ದೇಶದ ಹಣದುಬ್ಬರ ಎರಡಂಕಿಯನ್ನು ದಾಟಿತು. ಹದಗೆಡುತ್ತಿರುವ ಜಾಗತಿಕ ಆರ್ಥಿಕ ಸ್ಥಿತಿ ಮತ್ತು ಇಂಧನಗಳ ಬೆಲೆ ಅಧಿಕವಾಗಿರುವುದೇ ಇದಕ್ಕೆ ಮುಖ್ಯ ಕಾರಣಗಳು ಎಂದು ತಜ್ಞರ ಅಭಿಪ್ರಾಯ.

ಆದರೆ ಕೆಲವು ಆಶಾದಾಯಕ ಮುನ್ಸೂಚನೆಗಳೂ ಇವೆ ಎನ್ನಲಾಗಿದೆ. ಈ ವರ್ಷ ಮುಂಗಾರು ಸಕಾಲಕ್ಕೆ ಬಂದಿದೆ ಮತ್ತು ಇಡೀ ದೇಶದಲ್ಲಿ ಮಳೆಯ ಪರಿಣಾಮ ಎಂದಿನಂತೆ ಇರುವುದು. ಹೀಗಾಗಿ ಕೃಷಿಕ್ಷೇತ್ರದಿಂದ ಅತ್ಯಧಿಕವಾದ ಉತ್ಪನ್ನವನ್ನು ಆಶಿಸಬಹುದು. ಆಗ ಹಣದುಬ್ಬರ ಸ್ವಲ್ಪವಾದರೂ ತಗ್ಗಬಹುದು ಎಂದು ನಂಬಲಾಗಿದೆ.

ಇತ್ತೀಚಿನ ಅಂತರರಾಷ್ಟ್ರೀಯ ವಿದ್ಯಮಾನಗಳು ಹಣದುಬ್ಬರದ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿವೆ. ಕಚ್ಚಾ ತೈಲದ ಬೆಲೆಯನ್ನು ಕೆಳಗೆ ಇಳಿಸಲು ಸಾಧ್ಯವಿಲ್ಲವೆಂದು ತೈಲೋತ್ಪಾದಕ ದೇಶಗಳು ಖಡಾಖಂಡಿತವಾಗಿ ಹೇಳಿಬಿಟ್ಟಿವೆ. ಹೀಗಾಗಿ ಹಣದುಬ್ಬರವು ಗಣನೀಯವಾಗಿ ಇಳಿಮುಖವಾಗುವ ಸಾಧ್ಯತೆ ಕಡಿಮೆ.

ಆರ್ಥಿಕ ಪ್ರಗತಿಯನ್ನು ತೀವ್ರಗೊಳಿಸುವ ಹುಮ್ಮಸ್ಸಿನಲ್ಲಿ ಭಾರತವು ಉದಾರೀಕರಣವನ್ನು ಲಂಗುಲಗಾಮಿಲ್ಲದೆ ಕೈಗೊಂಡಿದ್ದೇ ಈ ಸಂಕಷ್ಟಕ್ಕೆ ಕಾರಣ ಎಂದು ಕಾಣುತ್ತದೆ. ಬೃಹದ್ ದೇಶವಾದ ಭಾರತದ ಆಂತರಿಕ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ಉದಾರೀಕರಣ ಮತ್ತು ಖಾಸಗೀಕರಣಗಳನ್ನು ಹೇರಿರುವುದು ಒಂದು ವಿಚಿತ್ರ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಜಾಗತಿಕ ವಿದ್ಯಮಾನಗಳು ಭಾರತದ ಆರ್ಥಿಕ ಪರಿಸ್ಥಿತಿಯ ಮೇಲೆ ನೇರವಾದ ಪರಿಣಾಮವನ್ನು ಬೀರುತ್ತಿವೆ. ಇದರಿಂದಾಗಿ ಭಾರತದ ಸಾಮಾನ್ಯ ಜನತೆ, ತಮ್ಮದಲ್ಲದ ತಪ್ಪಿಗಾಗಿ ತಲೆತಂಡ ತೆರಬೇಕಾದ ಪರಿಸ್ಥಿತಿ ಒದಗಿಬಂದಿದೆ. ಇದು ಭಾರತೀಯ ಆರ್ಥಿಕತೆಯನ್ನು ದುರ್ಬಲಗೊಳಿಸಿರುವುದರ ಜೊತೆಗೆ, ಅದು ಜಾಗತಿಕ ಶಕ್ತಿಗಳ ಮತ್ತು ಪ್ರಭಾವಗಳ ಮೇಲೆ ಅವಲಂಬಿಸುವಂತೆ ಮಾಡಿದೆ. ಇದು ನಿಜಕ್ಕೂ ದುರದೃಷ್ಟಕರ.

**ನಮ್ಮ ಸರ್ಕಾರದ ಪರಮೋಚ್ಚ ಹೊಣೆ ನಮ್ಮ ಜನತೆಯನ್ನು ಹೊರಗಿನ ಎಲ್ಲ ಆತಂಕಕಾರಿ ಪ್ರಭಾವಗಳಿಂದ ರಕ್ಷಿಸುವುದು. ನಮ್ಮ ಗಡಿಗಳನ್ನು ಸೈನ್ಯವು ರಕ್ಷಿಸುವಂತೆ, ನಮ್ಮ ಜನರ ಆರ್ಥಿಕ ಸುರಕ್ಷತೆಯನ್ನು ರಕ್ಷಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅದಕ್ಕಾಗಿ, ಶ್ರೀಮಂತಿಕೆಯ ಹೆಚ್ಚಳ ಮಾತ್ರ ನಮ್ಮ ಗುರಿಯಾಗದೆ, ಇರುವ ಸಂಪತ್ತಿನ ಸರಿಯಾದ ಹಂಚಿಕೆ ಮತ್ತು ಸಾಮಾಜಿಕ ಬಾಧ್ಯತೆಗಳಿಗೆ ಪ್ರಾಮುಖ್ಯತೆ ಕೊಡಬೇಕು. ಇದು ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಬಹಳ ಆವಶ್ಯಕ.**

### ಆಶ್ರಮದ ಕಾರ್ಯಕ್ರಮಗಳು

ಆಗಸ್ಟ್ 2008

| | | |
|---|---|---|
| 12 | ಮಂಗಳವಾರ | ಏಕಾದಶಿ |
| 16 | ಶನಿವಾರ | ಸ್ವಾಮಿ ನಿರಂಜನಾನಂದ ಜಯಂತಿ |
| 24 | ಭಾನುವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| 27 | ಬುಧವಾರ | ಏಕಾದಶಿ |
| 29 | ಶುಕ್ರವಾರ | ಸ್ವಾಮಿ ಅದ್ವೈತಾನಂದ ಜಯಂತಿ |

ಆಶ್ರಮದ ಸಭಾಂಗಣದಲ್ಲಿ ಪ್ರತಿ ಶನಿವಾರ ಇಂಗ್ಲೀಷಿನಲ್ಲಿಯೂ ಪ್ರತಿ ಭಾನುವಾರ ಕನ್ನಡದಲ್ಲಿಯೂ ಸಂಜೆ ೬.೦೦ ಗಂಟೆಗೆ ಪ್ರವಚನಗಳು ನಡೆಯುತ್ತವೆ. ಏಕಾದಶಿಯ ದಿನಗಳಂದು ರಾಮನಾಮ ಸಂಕೀರ್ತನೆ ಇರುತ್ತದೆ. **ಎಲ್ಲರಿಗೂ ಸುಸ್ವಾಗತ.**